**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ದೀಪಾಂಜಲಿನಗರ, ವಾರ್ಡ್ ಸಂಖ್ಯೆ-158, ಪಾಲಿಕೆ ಸದಸ್ಯರ ಕಛೇರಿ, 8ನೇ ಮುಖ್ಯರಸ್ತೆ, ಆವಲಹಳ್ಳಿ ಬಿಡಿಎ ಬಡಾವಣೆ,
(ಅಭಯ ಆಂಜನೇಯ ದೇವಸ್ಥಾನ ಹತ್ತಿರ)ಬೆಂಗಳೂರು-560 026

---

ಸಂಖ್ಯೆ: ಸ.ಕಾ.ನಿ.ಅ/ಗಾಅ/ಪಿಆರ್/315/20-21

ದಿನಾಂಕ:-07-11-2020

ವಾರ್ಡ್ ಸಂಖ್ಯೆ : 158 ವಾರ್ಡ್ ಸಭೆಯ ನಡವಳಿ

ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ ಶ್ರೀ. ಜಯಶಂಕರ್ .ಬಿ.ಎಸ್ | ನೋಡೆಲ್ ಅಧಿಕಾರಿ | ಕಟ್ಟಡ ಪರವಾನಿಗೆ ಕೋಶ (ದಕ್ಷಿಣ) | ಹಾಜರಾಗಿರುತ್ತಾರೆ |
| 2 | ಶ್ರೀ. ರಘುನಾಥ್ .ಕೆ.ಎನ್. | ಸದಸ್ಯ ಕಾರ್ಯದರ್ಶಿ | ಸ.ಅಭಿಯಂತರರು | ಹಾಜರಾಗಿರುತ್ತಾರೆ |
| 3 | ಶ್ರೀ. ಅಜಯ್ .ಎಸ್. | ಸದಸ್ಯ ಕಾರ್ಯದರ್ಶಿ | ಕೆ.ಅ. ಗುತ್ತಿಗೆ ಆದಾರದ ಮೇಲೆ | ಹಾಜರಾಗಿರುತ್ತಾರೆ |
| 4 | ಶ್ರೀ. ಹೆಚ್. ಮಂಜುನಾಥ್ | ಸದಸ್ಯರು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.158 | ಹಾಜರಾಗಿರುತ್ತಾರೆ |
| 5 | ಶ್ರೀ. ಬಿ. ರಾಮಯ್ಯ | ಸದಸ್ಯರು | ಕೆಲಸ ಪರಿವೀಕ್ಷಕರು ವಾರ್ಡ್ ನಂ.158 | ಹಾಜರಾಗಿರುತ್ತಾರೆ |
| 6 | ಶ್ರೀ. ಅಭಿಲಾಷ್ .ಎನ್. | ಸದಸ್ಯರು | ಕಂದಾಯ ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 7 | ಶ್ರೀಮತಿ. ಸುಹಾಸಿನಿ | ಸದಸ್ಯರು | ಹಿ.ಆ. ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 8 | ಶ್ರೀಮತಿ ಗಿರಿಜಮ್ಮ | ಸದಸ್ಯರು | ನಾಗರೀಕ ಪ್ರತಿನಿಧಿಗಳು | ಹಾಜರಾಗಿರುತ್ತಾರೆ |
| 9 | ಶ್ರೀ ಸಿ. ಹುಚ್ಚಪ್ಪ | ಸದಸ್ಯರು | ನಾಗರೀಕ ಪ್ರತಿನಿಧಿಗಳು | ಹಾಜರಾಗಿರುತ್ತಾರೆ |
| 10 | ಶ್ರೀ. ಗುರುಮೂರ್ತಿ | ಸದಸ್ಯರು | ನಾಗರೀಕ ಪ್ರತಿನಿಧಿಗಳು | ಹಾಜರಾಗಿರುತ್ತಾರೆ |
| 11 | ಶ್ರೀ. ಹರೀಶ್ ಕುಮಾರ್ .ಕೆ. | ಸದಸ್ಯರು | ನಾಗರೀಕ ಪ್ರತಿನಿಧಿಗಳು | ಹಾಜರಾಗಿರುತ್ತಾರೆ |
| 12 | ಶ್ರೀ. ಮಂಜುನಾಥ್ .ಪಿ. | ಸದಸ್ಯರು | ನಾಗರೀಕ ಪ್ರತಿನಿಧಿಗಳು | ಹಾಜರಾಗಿರುತ್ತಾರೆ |

**ವಾರ್ಡ ಸಂಖ್ಯೆ:158 ಕ್ಕೆ ಸಂಬಂಧಪಟ್ಟಂತೆ ಹಾಜರಾದ ಇತರೆ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ**

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂದಿಗಳ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀಮತಿ. ಉಷಾ | ಸ.ಅಭಿಯಂತರರು | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 2 | ಶ್ರೀ. ಶಿವರಾಮಯ್ಯ | ಕಿ. ಅಭಿಯಂತರರು | ಬೆಸ್ಕಾಂ | ಹಾಜರಾಗಿರುತ್ತಾರೆ |
| 3 | ಶ್ರೀ ಕೃಷ್ಣಪ್ಪ | ಸಹಾಯಕ ಅಭಿಯಂತರರು | ಬಿ.ಡಬ್ಲ್ಯೂ.ಎಸ್. ಎಸ್.ಬಿ. (ಅರ್ಕಾವತಿ ಭವನ) | ಹಾಜರಾಗಿರುತ್ತಾರೆ |
| 4 | ಶ್ರೀ. ಮಂಜುನಾಥ್ | ಗುತ್ತಿಗೆದಾರರು | ಬೀದಿ ದೀಪ ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 5 | ಶ್ರೀ ಎಂ.ಸಿ. ನರಸಿಂಹಯ್ಯ | ಮೇಸ್ತ್ರಿ | ತೋಟಗಾರಿಕೆ | ಹಾಜರಾಗಿರುತ್ತಾರೆ |

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ : 158 ರ ಕಾರ್ಯದರ್ಶಿಗಳು ಹಾಗೂ ಸದಸ್ಯರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು. ವಾರ್ಡ್ ಸಮಿತಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಬಗ್ಗೆ ಅದರ ಕ್ರಮಗಳ ಬಗ್ಗೆ ಚರ್ಚಿಸುತ್ತ ಸಭೆ ಮಾಡಲಾಯಿತು. ಪೊಲೀಸ್ ಕಂಪ್ಲೈಟ್ ಬಗ್ಗೆ ಚರ್ಚಿಸಲಾಯಿತು. ಅದರ ಮೇಲೆ ಕ್ರಮಕೈಗೊಂಡಿರುವುದಾಗಿ ತಿಳಿಸಿದರು.

ವಾರ್ಡ್ ಸಮಿತಿ ಸಭೆಯಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ಸದಸ್ಯರು ಹಾಜರಿದ್ದು, ಆವಲಹಳ್ಳಿ ವಿನೋಭ ಕಾಲೋನಿಯ ಸಾರ್ವಜನಿಕರ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ವಿವರಿಸಿದರು ಹಾಗೂ ಸಮುದಾಯ ಭವನದಲ್ಲಿ ಪುಂಡರು ಗಲಾಟೆ ಮತ್ತು ಅಕ್ರಮ ಚಟುವಟಿಕೆ ಮಾಡುತ್ತಿದ್ದರಿಂದ ಪೊಲೀಸ್ ಠಾಣೆಗೆ ದೂರನ್ನು ನೀಡಿರುವುದಾಗಿ ತಿಳಿಸಿದರು ಹಾಗೂ ದೀಪಾಂಜಲಿನಗರ ಸಿದ್ಧಾರ್ಥ ರಸ್ತೆಯಲ್ಲಿ ಗಾಂಜ ಮತ್ತು ಮಧ್ಯಪಾನ ಮಾಡುತ್ತಿರುವುದು ಕಂಡುಬಂದಿದ್ದರಿಂದ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳಲು ಇದಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಅಧಿಕಾರಿಯವರಿಗೆ ಕ್ರಮವನ್ನು ಕೈಗೊಳ್ಳಲು ನೋಡೆಲ್ ಅಧಿಕಾರಿರವರು ತಿಳಿಸಿದರು.

ಕ್ರಮ : ಪೊಲೀಸ್ ಇಲಾಖೆ

ದೀಪಾಂಜಲಿನಗರ ವಾರ್ಡಿನ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಎಲ್ಲೆಂದರಲ್ಲಿ ಕಾಮಗಾರಿಯನ್ನು ಮಾಡಿ ರಸ್ತೆಯನ್ನು ಸಮತಟ್ಟು ಮಾಡದೇ ಹಾಗೇಯೆ ಬಿಟ್ಟಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು ತಿಳಿಸಿದರು. ಇದರ ಬಗ್ಗೆ ತಕ್ಷಣವೇ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಸಹಾಯಕ ಅಭಿಯಂತರರವಿಗೆ ನೋಡೆಲ್ ಅಧಿಕಾರಿರವರು ತಿಳಿಸಿದರು. 9ನೇ ಅಡ್ಡರಸ್ತೆ, 12ನೇ ಮುಖ್ಯರಸ್ತೆ, ಗಿರಿನಗರ ಕಾಂಕ್ರೀಟ್ ಮತ್ತು ಡಾಂಬರ್ ಹಾಕಲು ಹಾಗೂ ಗಣಪತಿನಗರ 7 ಮತ್ತು 8ನೇ ಅಡ್ಡರಸ್ತೆ, ಎಫ್.ಸಿ.ಐ. ಲೇಔಟ್, 1ನೇ ಮುಖ್ಯರಸ್ತೆ, ಪಟೇಲ್ ಪುಟ್ಟಪ್ಪ ಇಂಡಸ್ಟ್ರೀಯಲ್ ಏರಿಯಾದಲ್ಲಿ ಹೊಸದಾಗಿ ಒಳಚರಂಡಿ ಪೈಪ್‌ನ್ನು ಅಳವಡಿಸಲು ಕೋರಿರುತ್ತಾರೆ. ಸದರಿ ಒಳಚರಂಡಿ ಪೈಪ್‌ನ್ನು ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಯಿತು.

ಕ್ರಮ : ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆ

4ನೇ ಅಡ್ಡರಸ್ತೆ, ವಿನೋಭ ಕಾಲೋನಿ ಮತ್ತು ದೀಪಾಂಜಲಿನಗರ ಸಿದ್ಧಾರ್ಥ ರಸ್ತೆ ಸುತ್ತ ಮತ್ತಲಿನ ಪ್ರದೇಶಗಳಲ್ಲಿ ಬೀದಿ ದೀಪಗಳು ದುರಸ್ಥಿಯಲ್ಲಿರುವುದರಿಂದ ಬೀದಿ ದೀಪಗಳನ್ನು ಸರಿಪಡಿಸಿ ಹೊಸ ಕಂಬವನ್ನು ಅಳವಡಿಸಲು ಸಂಬಂಧಪಟ್ಟ ಗುತ್ತಿಗೆದಾರರಾದ ಶ್ರೀ. ಮಂಜುನಾಥ್ ರವರು ಗೈರು ಹಾಜರಿದ್ದರಿಂದ ಸಂಬಂಧಪಟ್ಟ ಅಧಿಕಾರಿರವರಿಗೆ ಸೂಚಿಸಿದರು.

ಕ್ರಮ : ಬೀದಿ ದೀಪಗಳ ನಿರ್ವಹಣೆ ಇಲಾಖೆ

ಮು.ತಿ.ನೋ____..

ಕಾಳಿಕಾಂಭ ದೇವಸ್ಥಾನ ರಸ್ತೆ ಮತ್ತು 5ನೇ ಅಡ್ಡರಸ್ತೆ, ಕುವೆಂಪು ರಂಗಮಂದಿರದ ಸುತ್ತಾಮುತ್ತ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿದೆ ಎಂದು ಸ್ಥಳೀಯ ಸಾರ್ವಜನಿಕರು ದೂರಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ಸಂಚಾರಿ ಪೊಲೀಸ್, ಬ್ಯಾಟರಾಯನಪುರ ಪೊಲೀಸ್ ಠಾಣೆಯ ಅಧಿಕಾರಿವರು ಅಗತ್ಯ ಕ್ರಮವನ್ನು ಕೈಗೊಂಡಿರುವುದಾಗಿ ತಿಳಿಸಿದರು.

ಕ್ರಮ : ಟ್ರಾಫಿಕ್ ಪೊಲೀಸ್, ಬ್ಯಾಟರಾಯನಪುರ

ವಾರ್ಡಿನಲ್ಲಿ ದಿನೆ ದಿನೆ ಕೋವಿಡ್-19 ಹೆಚ್ಚಾಗಿರುವುದರಿಂದ ಸಾರ್ವಜನಿಕರಿಗೆ ಅರಿವು ಮೂಡಿಸಲು ಪ್ರಚಾರ ಶಿಬಿರಗಳನ್ನು ಮಾಡಲು ತಿಳಿಸಿದರು ಹಾಗೂ ಕೆ.ಬಿ. ಕಾಲೋನಿಯಲ್ಲಿ ಸ್ಮಶಾನವಿದ್ದು ಗಿಡ ಗಂಟೆಗಳು ಬೆಳೆದು ಇದರಿಂದ ಸೊಳ್ಳೆ ಕಾಟವು ಹೆಚ್ಚಾಗಿದ್ದು ಅಲ್ಲಿ ವಾಸ ಮಾಡುತ್ತಿರುವ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಇದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ನೋಡೆಲ್ ಅಧಿಕಾರಿಯವರು ಹಿರಿಯ ಆರೋಗ್ಯ ಪರಿವೀಕ್ಷಕರವರಿಗೆ ತಿಳಿಸಿದರು.

ಕ್ರಮ : ಆರೋಗ್ಯ ಇಲಾಖೆ

ಕಸ್ತೂರಿಬಾ ಕಾಲೋನಿ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಹಾಗೂ ದೀಪಾಂಜಲಿನಗರ ವಾರ್ಡ್ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ, ವಿಂಗಡಣೆ ಹಾಗೂ ವಿಲೇವಾರಿ ಸಮರ್ಪಕವಾಗಿ ನಿರ್ವಹಿಸದೆ ಇರುವುದು ಆಟೋ ಟಿಪ್ಪರ್‌ಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಶ್ರೀ. ವೆಂಕಟೇಶ್ ರವರು ತಿಳಿಸಿದರು. ಸದರಿ ದೂರಿಗೆ ಸಂಬಂಧಿಸಿದಂತೆ ಘನತ್ಯಾಜ್ಯ ನಿರ್ವಹಣೆ ಕೋಶ ಅಧಿಕಾರಿರವರಿಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ನೋಡೆಲ್ ಅಧಿಕಾರಿಯವರು ತಿಳಿಸಿದರು.

ಕ್ರಮ : ಘನತ್ಯಾಜ್ಯ ನಿರ್ವಹಣೆ ಕೋಶ ಇಲಾಖೆ

ವಾರ್ಡಿನಲ್ಲಿ ರಸ್ತೆ ಗುಂಡಿಗಳ ಬಗ್ಗೆ ಚರ್ಚಿಸಲಾಗಿ ಹೊಸದಾಗಿ ಗುರುತಿಸಲಾದ ರಸ್ತೆ ಗುಂಡಿಗಳನ್ನು ಜಲಮಂಡಳಿ ಅಗೆತಗಳು ಹಾಗೂ ಇನ್ನಿತರೆ ಅಗೆತಗಳಿಗೆ ಸಂಬಂಧಪಟ್ಟಿರುವುದರಿಂದ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಅಧ್ಯಕ್ಷರವರು ತುರ್ತಾಗಿ ನಿರ್ವಹಿಸಲು ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಲಾಯಿತು. ರಸ್ತೆಯ ಬದಿಯಲ್ಲಿರುವ ಶೋಲ್ಡರ್ ಡ್ರೈನ್‌ನ್ನು ಸ್ವಚ್ಚ ಮಾಡಲು ಸೂಚಿಸಲಾಯಿತು. ಮಳೆ ನೀರಿನಿಂದ ಆಗಿರುವ ತೊಂದರೆಗಳ ಬಗ್ಗೆ ಹಾಗೂ ನೀರಿನ ಪೈಪ್ ಸಮಸ್ಯೆಯನ್ನು ಪರಿಹರಿಸಲು ಅದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಯಿತು. ರಂಗನಾಥ ಕಾಲೋನಿ ಸಿ.ಎ. ಜಾಗವನ್ನು ಒತ್ತುವರಿ ಮಾಡುತ್ತಿರುವುದಾಗಿ ಸಾರ್ವಜನಿಕರಿಂದ ದೂರು ಬಂದಿದ್ದು ಹಾಗೂ ಒಂಟಿ ಮನೆ ಮತ್ತು ಎಸ್.ಸಿ. / ಎಸ್.ಟಿ. ಅನುದಾನಗಳ ಅಡಿಯಲ್ಲಿ ಬರುವ ಕಾಮಗಾರಿಗಳ ಮಾಹಿತಿಯನ್ನು ನೀಡುವಂತೆ ಹಾಗೂ ಸಿದ್ದಾರ್ಥ ರಸ್ತೆ, ದೀಪಾಂಜಲಿನಗರದಲ್ಲಿ ಸಿ.ಸಿ. ಕ್ಯಾಮರವನ್ನು ಅಳವಡಿಸಲು ಶ್ರೀ. ವೆಂಕಟೇಶ್ ರವರು ಕೋರಿರುತ್ತಾರೆ. ಇದರ ಬಗ್ಗೆ ಕ್ರಮವನ್ನು ಕೈಗೊಳ್ಳಲು ಸಹಾಯಕ ಅಭಿಯಂತರವರಿಗೆ ತಿಳಿಸಿದರು.

ಕ್ರಮ : ಕಾಮಗಾರಿ ಇಲಾಖೆ

ವಾರ್ಡ್‌ನಲ್ಲಿ ವಿದ್ಯುತ್ ಇಲಾಖೆಯವರು ಮರಗಳನ್ನು ಕಟಾವು ಮಾಡಿ ಅಲ್ಲಿಯೇ ಬಿಸಾಡಿ ಹೋಗಿರುವುದು ಕಂಡುಬಂದಿದ್ದು ಅದನ್ನು ತೆರವುಗೊಳಿಸುವಂತೆ ಅಧ್ಯಕ್ಷರವರು ಬೆಸ್ಕಾಂ ಸಹಾಯಕ ಅಭಿಯಂತರವರಿಗೆ ತಿಳಿಸಿದರು.

ಕ್ರಮ : ಬೆಸ್ಕಾಂ ಇಲಾಖೆ

ಕಸ್ತೂರಿಬಾ ಕಾಲೋನಿ, ವೀರಭದ್ರನಗರ ಸ್ಥಳಗಳಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಬಂದು ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರದ ಸೌಲಭ್ಯಗಳನ್ನು ಪಡೆಯುತ್ತಿರುವುದಾಗಿ ವೆಂಕಟೇಶ್ ರವರು ದೂರನ್ನು ನೀಡಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ತಕ್ಷಣ ಸೂಕ್ತ ಕ್ರಮವನ್ನು ಕೈಗೊಳ್ಳುವಾಗಿ ಕಂದಾಯ ಇಲಾಖೆಯವರಿಗೆ ಸೂಚಿಸಲಾಯಿತು.

ಕ್ರಮ : ಕಂದಾಯ ಇಲಾಖೆ

ಸ್ವಯಂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಿ ಆರೋಗ್ಯ ಮತ್ತು ಶಿಕ್ಷಣ ಬಗ್ಗೆ ಜನ ಜಾಗೃತಿ ಮೂಡಿಸುವಂತೆ ಹಾಗೂ ವಿನೋಭ ಕಾಲೋನಿಯಲ್ಲಿ ಸಾರ್ವಜನಿಕರು ವ್ಯಾಯಾಮ ಶಾಲೆ ಮತ್ತು ಸಾರ್ವಜನಿಕ ಗ್ರಂಥಾಲಯ ಅವಶ್ಯವಿರುವುದಾಗಿ ಕೋರಿರುತ್ತಾರೆ. ಸಂಬಂಧಪಟ್ಟ ಸಮಾಜ ಕಲ್ಯಾಣ ಇಲಾಖೆಯವರಿಗೆ ತಿಳಿಸಲು ಸದಸ್ಯ ಕಾರ್ಯದರ್ಶಿ ರವರಿಗೆ ನೋಡೆಲ್ ಅಧಿಕಾರಿಯವರು ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮಕೈಗೊಳ್ಳುವ ನಿರೀಕ್ಷೆಯೊಂದಿಗೆ ಹಾಗೂ ಸಭೆಗೆ ಗೈರು ಹಾಜರಾದ ಅಧಿಕಾರಿರವರುಗಳಿಗೆ ಕಾರಣ ಕೇಳಿ ನೋಟೀಸ್ ನೀಡುವಂತೆ ಕಾರ್ಯದರ್ಶಿ ರವರಿಗೆ ತಿಳಿಸುತ್ತಾ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಜಯಶಂಕರ್ .ಬಿ.ಎಸ್. ರವರು ಎಲ್ಲಾರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Samuel .S — 10/11/2020

ಕಾರ್ಯದರ್ಶಿ
ವಾರ್ಡ್ ಸಂಖ್ಯೆ : 158 (ದೀಪಾಂಜಲಿನಗರ)

(ಜಯಶಂಕರ್ .ಬಿ.ಎಸ್)
ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ : 158 (ದೀಪಾಂಜಲಿನಗರ)

<u>ಪ್ರತಿಯನ್ನು:-</u>

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.